# ಲೋಕೋತ್ತರ

ಪ್ರತಿಯೊಬ್ಬರಲ್ಲೂ ಒಂದೊಂದು ಬಗೆಯ ಶಕ್ತಿಯುಂಟು. ಅಂಥ ಶಕ್ತಿ ವೃದ್ಧಿಸಿಕೊಂಡು ಬದುಕಬೇಕು. ನಾವು ಬದುಕುವುದು ಮಾತ್ರವಲ್ಲ; ಇನ್ನಿತರರನ್ನು ಬದುಕಿಸಿಕೊಳ್ಳುವುದು ಮುಖ್ಯ. ಶಕ್ತಿ ಸಂವರ್ಧನೆಯೇ ನಮ್ಮ ಮುಖ್ಯ ಗುರಿಯಾಗಬೇಕು. ಗುರಿಯಿಲ್ಲದೆ ಬದುಕುವುದಕ್ಕೆ ಸಾಧ್ಯವಿಲ್ಲವಷ್ಟೆ. ಸಾಧನವು ಸಾಧ್ಯತೆಯ ಕಡೆಗೆ ಮುಖ ಹಾಕಬೇಕು. ಇಂಥ ಸಾಧನಗಳನ್ನು ಹಿಡಿದವರು ನಿಂತವರನ್ನು ನಡೆಸುತ್ತಾರೆ. ಇಷ್ಟು ಮಾತ್ರವಲ್ಲ, ಅವರು ನಡೆಯುವವರನ್ನು ಗುರಿ ತಲುಪಿಸುತ್ತಾರೆ. ಯಾರು ಕೆಟ್ಟದ್ದನ್ನು ಮಾಡುವುದಿಲ್ಲವೋ ಅವನು ದೊಡ್ಡವನೇ ಸರಿ. ಕೆಡುಕು ಮಾಡದವನನ್ನು ಇನ್ನೊಮ್ಮೆ ಮಾಡದಂತೆ ನಡೆಸುವವನೂ ಅವನೇ ಆಗಿರುತ್ತಾನೆ. ಇಂಥವರು ನಮ್ಮ ಲೋಕಕ್ಕೆ ಯಾವಾಗಲೂ ಬೇಕು. ಇಂಥವರನ್ನೇ 'ಲೋಕೋತ್ತರ' ಎಂದು ಲೋಕ ಕರೆಯುತ್ತದೆ. ಇಂಥವರಿಂದ ಲೋಕಕ್ಕೆ ಉತ್ತರೋತ್ತರ ಪ್ರಾಪ್ತವಾಗುತ್ತದೆ.

ಅದು ಋಷಿಗಳ ಕಾಲವಾಗಿತ್ತು. ಅಂಥವನೊಬ್ಬ ಪುರಾತನಕಾಲದಲ್ಲಿದ್ದ. ಅವನ ಹೆಸರು ಉದ್ದಾಲಕ. ಋಷಿಗಳ ಸಮೂಹದಲ್ಲಿಯೇ ಅವನದು ದೊಡ್ಡ ಹೆಸರು. ಅದೊಂದು ಋಷ್ಯಾಶ್ರಮ. ಧೌಮ್ಯರು ಆ ಆಶ್ರಮದ ಆಚಾರ್ಯರು. ಅವರ ಬಳಿ ಸಮರ್ಥರಾದ ಅನೇಕ ವಿದ್ಯಾರ್ಥಿಗಳಿದ್ದರು. ಅಂಥವರಲ್ಲಿ ಒಬ್ಬ. ಆಗ ಅವನಿನ್ನೂ 'ಉದ್ದಾಲಕ' ಎಂಬ ಹೆಸರನ್ನು ಪಡೆದಿರಲಿಲ್ಲ. ಆಶ್ರಮದ ವಿದ್ಯಾರ್ಥಿಗಳು ಅವನನ್ನು 'ಆರುಣಿ' ಎಂದು ಕರೆಯುತ್ತಿದ್ದರು. ಜ್ಞಾನವು ಕಾಲುಭಾಗ ಪ್ರಯತ್ನದಿಂದ ಬಂದರೆ; ಉಳಿದ ಭಾಗ ಗುರುವಿನ ದಯೆಯಿಂದ ಬರುತ್ತದೆಂದು ಆರುಣಿ ಖಚಿತವಾಗಿ ನಂಬಿಕೊಂಡಿದ್ದ. ಆರುಣಿಯೋಬುದ್ಧಿವಂತ ವಿದ್ಯಾರ್ಥಿ. ಅವನಾಗಲೇ ಹಲವು ಶಾಸ್ತ್ರಶಾಖೆಗಳನ್ನು ಬಲ್ಲವನಾಗಿದ್ದ. ತೇಜಸ್ಸು ಅವನ ಮುಖದ ಮೇಲೆ ನಲಿದಾಡುತ್ತಿತ್ತು. ಕಣ್ಣುಗಳು ಹೊಳಪಿನಿಂದ ಕೂಡಿದ್ದವು. ಗುರು ಹೇಳಿದ ಕೆಲಸಗಳನ್ನು ಮಾಡುವುದರಲ್ಲಿ ಅವನು ನಿಸ್ಸೀಮ. ಧೌಮ್ಯ ಮಹರ್ಷಿಗಳು ಪ್ರತಿನಿತ್ಯ ಪ್ರತಿಯೊಬ್ಬರಿಗೂ ಒಂದೊಂದು ಕಾಯಕಕ್ಕೆ ಹಚ್ಚುತ್ತಿದ್ದರು. ಒಮ್ಮೆ ಗುರುಗಳು ಆರುಣಿಯನ್ನು ಕರೆದು 'ನೀನು ಗದ್ದೆಗೆ ಹೋಗು. ಗದ್ದೆಯ ಪಶ್ಚಿಮಭಾಗದಲ್ಲಿ ನೀರು ಹರಿದು ಹೋಗುತ್ತಿದೆ. ಅಲ್ಲಿ ನೀರು ನಿಲ್ಲುತ್ತಿಲ್ಲ. ಮಣ್ಣು ಅಗೆದು ಸೇರಿಸಿ ಅದನ್ನು ತಡೆದು ಬಾ' ಎಂದು ಹೇಳಿಕಳುಹಿಸಿದರು.

ಆಚಾರ್ಯರ ಮಾತನ್ನು ಹಿಗ್ಗಿನಿಂದ ಆರುಣಿ ಸ್ವೀಕರಿಸಿದ. ಆರುಣಿಗೊ ಗುರುಹೇಳಿದ ಮಾತು ಶಿರೋಧಾರ್ಯ. ಅವನು ಹಿಗ್ಗಿನಿಂದ ಗದ್ದೆಯ ಕೆಲಸಕ್ಕೆ ಹೊರಟ. ಅವನು ಗದ್ದೆಗೆ ಬಂದು ನೋಡಿದ. ಈ ಕೆಲಸ ತುಂಬಾ ಹಗುರ ಎನಿಸಿತು. ಅವನು ಮಣ್ಣನ್ನು ಅಗೆದು ಪೇರಿಸಿ ಒಡ್ಡು ಹಾಕಿದ. ಮಳೆ ಬಂದರೆ ನೀರು ಹೋಗುವುದಿಲ್ಲವೆಂಬುದನ್ನು ಅವನು ಖಚಿತಪಡಿಸಿಕೊಂಡ.

ಆರುಣಿ ಗದ್ದೆ ಕೆಲಸ ಮಾಡಿ ಮುಗಿಸುವಷ್ಟರಲ್ಲಿ ಮುಗಿಲಲ್ಲಿ ಮೋಡ ಹನಿಯೊಡೆಯಿತು. ಆರುಣಿಗೆ ತಾನು ಮಾಡಿದ ಕೆಲಸದ ಪರಿಣಾಮ ಏನಾಗುವುದೆಂದು ಚಿಂತಿಸಲು ಹೋಗಲಿಲ್ಲ. ಗುರುಕಾರ್ಯದ ನಿರೀಕ್ಷಣೆಗೆ ಮಳೆ ಅನುಕೂಲ ಮಾಡಿತೆಂದು ತಿಳಿದುಕೊಂಡ. ಆರುಣಿ ಮುಗಿಲಿನತ್ತ ನಿಂತು ನೋಡತೊಡಗಿದ. ಮಳೆ ಜೋರಾಯಿತು. ಅದು ಮುಸಲಧಾರೆಯಾಗಿ ಸುರಿಯಿತು. ಆರುಣಿಗೊ ಇದು ಹಿಗ್ಗೋಹಿಗ್ಗು. ಮಳೆ ಬರದೆ ಹೋಗಿದ್ದರೆ ಆಶ್ರಮಕ್ಕೆ ಹೋಗಬೇಕಾಗಿತ್ತು. ತನ್ನ ಕೆಲಸದ ಪರಿಣಾಮ ತಿಳಿಯಲು ಆಗುತ್ತಿರಲಿಲ್ಲ. ಈಗ ನೋಡುವಂತಾದುದಕ್ಕೆ ಸಂತೋಷ ತಂದಿತು. ಅಷ್ಟರಲ್ಲಿ ಒಂದು ಕೋಲ್ಮಿಂಚು ಸೆಳೆಯಿತು. ಆರುಣಿ ನೋಡುತ್ತಾನೆ. ಅವನು ಮಾಡಿದ ಕೆಲಸವೆಲ್ಲಾ ಮಳೆಯ ನೀರಿನಲ್ಲಿ ಕೊಚ್ಚಿಹೋಗಿದೆ. ಆರುಣಿ ಉತ್ಸಾಹಗೊಂಡ. ಮೇಲೆ ಮಳೆ ಸುರಿಯುತ್ತಿತ್ತು. ಅದು ಹುಯ್ಯುವಾಗಲೆ ಮಣ್ಣನ್ನು ಅಗಿದ. ನೆನೆದ ಮಣ್ಣನ್ನು ಸೇರಿಸಿ ಒಡ್ಡುಗಟ್ಟತೊಡಗಿದ. ನೀರು ದೂರದಿಂದ ಹರಿದು ಉಕ್ಕುಕ್ಕಿ ಹರಿಯುತ್ತಿತ್ತು. ಅವನು ಕಟ್ಟಿದ ಒಡ್ಡು ಮತ್ತೆ ಕೊಚ್ಚಿ ಹೋಗುತ್ತಿತ್ತು. ಆದರೆ, ಆರುಣಿಗೆ ಚೆಂಡು ಪುಟಿದಂತೆ ಉತ್ಸಾಹ ಹೆಚ್ಚಾಗುತ್ತಲೇ ಇತ್ತು. ಅವನು ನೆಲವನ್ನು ಮತ್ತೆ ಅಗೆದು ಒಡ್ಡು ಕಟ್ಟಿದ. ಆದರೆ, ಈ ಸಲವೂ ಒಡ್ಡು ಕೊಚ್ಚಿಹೋಯಿತು. ಮಳೆಯೋ ಇನ್ನೂ ಹೆಚ್ಚಾಯಿತು. ಸಂಜೆಯ ಕತ್ತಲು ಆವರಿಸಿತು. ಮತ್ತೆ ಮಿಂಚು ಸುಳಿಯಿತು. ಅದರ ಬೆಳಕಿನಲ್ಲಿ ಮತ್ತೆ ನೋಡಿದ. ಮರಳಿ ಆರುಣಿ ಕಟ್ಟಿದ ಒಡ್ಡು ನೀರು ಪಾಲಾಗಿತ್ತು. ಮಳೆಯಿಂದ ಅವನು ನೆನೆದುಹೋಗಿದ್ದ. ಆದರೆ, ಅವನ ಉತ್ಸಾಹ ಮಾತ್ರ ಬತ್ತಿರಲಿಲ್ಲ. ಮಣ್ಣಿನಿಂದ ನೀರನ್ನು ತಡೆಯಲು ಸಾಧ್ಯವಿಲ್ಲವೆಂದು ಆರುಣಿಗೆ ಮನವರಿಕೆ ಆಯಿತು. ಅವನು ತನ್ನ ಮೌಂಜಿಯನ್ನು ಬಿಗಿಗೊಳಿಸಿಕೊಂಡ. ಕೌಪೀನವನ್ನು ಸರಿ ಮಾಡಿಕೊಂಡ. ಅವನು ನೀರಿಗೆ ಅಡ್ಡವಾಗಿ ಮಲಗಿದ. ಮಳೆ ಸುರಿಯುತ್ತಲೇ ಇತ್ತು. ಕೋಲ್ಮಿಂಚು ಬಂದಾಗ ಮಗ್ಗಲನ್ನು ನೋಡಿದ. ನೀರು ದೂರದವರೆಗೆ ನಿಂತಿತ್ತು. ಆರುಣಿಗೆ ಹಿಗ್ಗಾಯಿತು. ಮಳೆ ಸುರಿಯುತ್ತಿತ್ತು. ನೀರು ಮಾತ್ರ ಏರುತ್ತಿತ್ತು. ಆರುಣಿ ಸ್ವಸ್ಥನಾಗಿಯೇ ಇದ್ದ. ಈಗ ಗದ್ದೆಯಲ್ಲಿ ನೀರು ನಿಂತಿತ್ತು. ಅವನು ಏಳುವ ವಿಚಾರವನ್ನು ಕೈಬಿಟ್ಟ.

ರಾತ್ರಿ ಕಳೆಯುತ್ತಿತ್ತು. ಇತ್ತ ಆಚಾರ್ಯ ಧೌಮ್ಯರು ಶಿಷ್ಯರನ್ನು ವಿಚಾರಿಸಿದರು. ಆರುಣಿ ಬರದಿರುವುದು ತಿಳಿಯಿತು. ಹೊರಗೆ ಧೋ ಎಂದು ಮಳೆ ಸುರಿಯುತ್ತಿದೆ. ಧೌಮ್ಯರಿಗೆ ಆತಂಕ ಶುರುವಾಯಿತು. ಕಾಡುಪ್ರಾಣಿಗಳು ಉಂಟು. ಎಲ್ಲಿ ಏನಾಯಿತೋ? ಎಂಬ ಚಿಂತೆ ಮಹರ್ಷಿಗಳನ್ನು ಆವರಿಸಿತು. ಅವರು ಹೊರಟು ನಿಂತರು. ಆಗ ಶಿಷ್ಯರು 'ನಾವು ಹೋಗಿ ಆರುಣಿಯನ್ನು ಕರೆತರುತ್ತೇವೆ. ಚಳಿ, ಕೆಸರು, ಏರಿಳಿತದ ದಾರಿ ಬೇರೆ ತಾವು ಪರ್ಣಶಾಲೆಯಲ್ಲೇ ಇರಿ' ಎಂದು ಕೇಳಿಕೊಂಡರು. ಆದರೆ, ಧೌಮ್ಯರು ಶಿಷ್ಯರ ಮಾತನ್ನು ಕೇಳಲಿಲ್ಲ. ಅವರು ಮಳೆಯನ್ನು ಲೆಕ್ಕಿಸದೆ ಹೊರಟುಬಿಟ್ಟರು. ಮುನಿಗಳ ಕರುಣೆಯೂ ಅಪಾರ. ಶಿಷ್ಯರು ಆಚಾರ್ಯರನ್ನು ಹಿಂಬಾಲಿಸಿದರು. ಗದ್ದೆಗೆ ಬಂದು ನೋಡುತ್ತಾರೆ. ಅವರಿಗೆ ನೀರು ಮಾತ್ರ ಕಂಡಿತು. ಆರುಣಿ ಮಾತ್ರ ಎಲ್ಲಿಯೂ ಕಾಣಲಿಲ್ಲ. ಗುರುಗಳು ಕೋಡಿಯ ಹತ್ತಿರ ಹೋಗಿ ನೋಡಿದರು. ಆರುಣಿ ಅಡ್ಡ ಮಲಗಿ ನೀರನ್ನು ತರುಬಿದ್ದಾನೆ. ಗುರುಗಳ ಕಣ್ಣಲ್ಲಿ ನೀರು ಹನಿಯಿತು. ಅವರು ಆರುಣಿಯ ಹತ್ತಿರ ಹೋದರು. ಆರುಣಿಯ ಕೈಹಿಡಿದೆತ್ತಿ 'ಮೇಲೆ ಬಾ' ಎಂದರು. ಆರುಣಿ ಎದ್ದು ಬಂದ. ಗದ್ದೆಯ ನೀರೆಲ್ಲಾ ಹರಿದು ಹೋಯಿತು. ಧೌಮ್ಯರು ತಮ್ಮ ಮೈಮೇಲಿದ್ದ ಉತ್ತರೀಯವನ್ನು ತೆಗೆದು ಆರುಣಿಗೆ ಹೊದಿಸಿ ಮೈದಡವಿದರು. 'ಇಂದಿನಿಂದ ನೀನು ಆರುಣಿಯಲ್ಲ; ಉದ್ದಾಲಕ. ದೇವರು ನಿನ್ನನ್ನು ಅನುಗ್ರಹಿಸಿದ್ದಾನೆ. ನೀನು ನಿಜಕ್ಕೂ ಲೋಕೋತ್ತರ' ಎಂದು ಕೈವಾರಿಸಿದರು. ಇದು ಶಕ್ತಿಸಂಚಯನದ ದಾರಿಯೂ ಹೌದು; ಆಂತರಿಕ ಶಕ್ತಿಯ ಅನ್ವೇಷಣವೂ ಹೌದು! ಆರುಣಿ – ಉದ್ದಾಲಕ ಅದನ್ನು ಮಾಡಿ ತೋರಿಸಿದ. ಇಂಥವರ ಪರಂಪರೆ ನಮ್ಮಲ್ಲಿ ಹೆಚ್ಚಾಗಬೇಕು. ದೃಢವ್ರತ ಮತ್ತು ನೈತಿಕನಿಷ್ಠೆ ಉದ್ದಾಲಕನ ಬಳಿಯಿತ್ತು! ಇಂದು ಅದರ ಅಭಾವ ನಮ್ಮನ್ನು ತೀವ್ರವಾಗಿ ಬಾಧಿಸುತ್ತಿದೆ.

■ **ಪುರಂಜೀವಿ**

## ಮಾತೇ ಮುತ್ತು

- ಸೇವೆ ಮಾಡುವುದರಿಂದ ಎಂದೂ ತೀರದಂತಹ ಸುಖವು ಲಭಿಸುತ್ತದೆ.
  —ಕಬೀರ್
- ಯಾರ ಅಂತಃಕರಣವು ಪರಿಶುದ್ಧವಾಗಿರುವುದೋ ಅವರಿಗೆ ದೇವರ ಸಾಕ್ಷಾತ್ಕಾರವಿರುತ್ತದೆ.
  —ಮಹಾತ್ಮ ಗಾಂಧಿ
- ಆಶೆಯನ್ನೇ ಅವಲಂಬಿಸಿ ಬದುಕಿದ್ದೇನೆ. ಜಗತ್ತಿನ ಎಲ್ಲರೂ ಹಾಗೆಯೇ ಎಂದುಕೊಂಡಿದ್ದೇನೆ.
  —ರಾಬರ್ಟ್ ಬ್ರಿಡ್ಜಸ್
- ಅಸೂಯೆ ಗೋರಿಯಷ್ಟು ಘೋರ.
  —ಬೈಬಲ್
- ಕಾಲನಿಗೂ ಕಾಲುಂಟು— ನಿಂತಲ್ಲಿ ನಿಲ್ಲನವನು, ಅವನ ತೇರಿನ ಗಾಲಿ ತಿರುಗುತಲಿಹುದು.
  —ದ.ರಾ. ಬೇಂದ್ರೆ
- ಹೆಂಗಸಿಗೆ ಗಂಡನನ್ನು ಬಿಟ್ಟು ಬೇರೇನೂ ಬೇಡ; ಆದರೆ ಗಂಡ ದೊರೆತೊಡನೆ ಎಲ್ಲವೂ ಬೇಕು.
  —ವಿಲಿಯಂ ಶೇಕ್ಸ್‌ಪಿಯರ್